# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಇವರು ಸದನದಲ್ಲಿ ಮಂಡಿಸಿರುವ ನಿಯಮ-330ರ ಸೂಚನೆಗೆ ಉತ್ತರಿಸುವ ಕುರಿತು.

**ಸೂಚನೆ:-**

ಪಶುಸಂಗೋಪನಾ ಇಲಾಖೆಯು ಪಶು ಮತ್ತು ಪ್ರಾಣಿಗಳಿಗಾಗಿ ಮೊಬೈಲ್ ವೆಟರಿನರಿ ಯೂನಿಟ್ ವಾಹನ ಪ್ರಾರಂಭಿಸಿದ್ದು, ಇದರಲ್ಲಿ ನಡೆದಿರುವ ಅವ್ಯವಹಾರದ ಮತ್ತು ಭ್ರಷ್ಟಾಚಾರದ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

**ಹೇಳಿಕೆ :-**

ಭಾರತ ಸರ್ಕಾರದ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ Establishment & Strengthening of Veterinary Hospitals and Dispensaries (LHDCP-ESVHD) ಯೋಜನೆಯಡಿ 2021-22ನೇ ಸಾಲಿನಲ್ಲಿ ಪ್ರತಿ ಒಂದು ಲಕ್ಷ ಜಾನುವಾರುಗಳಿಗೆ ಒಂದು ಸಂಚಾರಿ ಪಶುಚಿಕಿತ್ಸಾ ಘಟಕ ವಾಹನವನ್ನು ಸ್ಥಾಪಿಸಲು ಪಶುಸಂಗೋಪನಾ ಇಲಾಖೆಗೆ ಅನುಮೋದನೆ ದೊರೆತಿರುತ್ತದೆ.

ಅದರಂತೆ ದಿನಾಂಕ:17.02.2022 ರಂದು ಭಾರತ ಸರ್ಕಾರ ಶೇಕಡ 100 ರಷ್ಟು ಅನುದಾನದಲ್ಲಿ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳನ್ನು ಖರೀದಿಸಿ, ಸದರಿ ವಾಹನಗಳನ್ನು ಬಳಸಿಕೊಂಡು ರೈತರ ಮನೆ ಬಾಗಿಲಿಗೆ ಅಗತ್ಯ ತುರ್ತು ಪಶುವೈದ್ಯಕೀಯ ಸೇವೆಗಳನ್ನು ಉಚಿತವಾಗಿ ನೀಡುವ ಸಲುವಾಗಿ ಸೇವಾ ಪೂರೈಕೆದಾರರನ್ನು ಗುರುತಿಸಲು ದಿನಾಂಕ:05.11.2022 ರಂದು 3 ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್ ನಲ್ಲಿ ಭಾಗವಹಿಸಿದ್ದ 4 ಸಂಸ್ಥೆಗಳ ಪೈಕಿ M/s EDUSPARK International Pvt. Ltd., Maharastra ಸಂಸ್ಥೆಯವರು ಮೂರು ವರ್ಷಗಳಿಗೆ ರೂ.173.09 ಕೋಟಿಗಳನ್ನು ನಮೂದಿಸಿ L1 ಬಿಡ್ಡುದಾರರಾದ್ದರಿಂದ ಸದರಿ ಸಂಸ್ಥೆಗೆ ಟೆಂಡರ್ ಷರತ್ತುಗಳಂತೆ 3 ವರ್ಷದ ಅವಧಿಗೆ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಮೂಲಕ ರೈತರ ಮನೆ ಬಾಗಿಲಿಗೆ ಅಗತ್ಯ ತುರ್ತು ಪಶುವೈದ್ಯಕೀಯ ಸೇವೆಗಳನ್ನು ಉಚಿತವಾಗಿ ಒದಗಿಸಲು ದಿನಾಂಕ:16.02.2023 ರಂದು ಆದೇಶ ನೀಡಲಾಗಿರುತ್ತದೆ.

2022-23ನೇ ಸಾಲಿನ ಭಾರತ ಸರ್ಕಾರದ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯಂತೆ ಕೇಂದ್ರದ ಪಾಲು ಶೇ.60 ಹಾಗೂ ರಾಜ್ಯದ ಪಾಲು ಶೇ.40ರ ಅನುಪಾತದ ಅನುದಾನದಲ್ಲಿ ಆಗಸ್ಟ್-2023 ರಿಂದ ಅಕ್ಟೋಬರ್-23ರ ವರೆಗೆ 290 ವಾಹನಗಳ ಮೂಲಕ ಸೇವೆಯನ್ನು ಒದಗಿಸಿರುತ್ತಾರೆ. ತದನಂತರ ಭಾರತ ಸರ್ಕಾರವು 2023-24ನೇ ಸಾಲಿಗೆ 275 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳ ಕ್ರಿಯಾ ಯೋಜನೆಗೆ ಮಾತ್ರ ಅನುಮೋದನೆ ನೀಡಿದ್ದರಿಂದ ಸೇವಾ ಪೂರೈಕೆದಾರರು ನವೆಂಬರ್-23 ರಿಂದ ಇದುವರೆವಿಗೂ 275 ವಾಹನಗಳ ಮೂಲಕ ಸೇವೆಯನ್ನು ನೀಡುತ್ತಿದ್ದಾರೆ.

ಸದರಿ ಟೆಂಡರ್‌ನಲ್ಲಿ ಮೂರು ವರ್ಷದ ಅವಧಿಗೆ ಸೇವೆಯನ್ನು ಒದಗಿಸುವ ಸಲುವಾಗಿ LUMPSUM ದರ ನೀಡಲು ಸೂಚಿಸಿದಂತೆ ಯಶಸ್ವಿ ಬಿಡ್ಡುದಾರರಾದ M/s EDUSPARK International Pvt. Ltd., Maharastra ರವರು LUMPSUM ದರ ನೀಡಿ, ಅದರಂತೆ ಸೇವೆಯನ್ನು ಒದಗಿಸಿರುತ್ತಾರೆ. ಕರಾರಿನಲ್ಲಿ ಪ್ರತಿ ವಾಹನಕ್ಕೆ, ಪ್ರತಿ ಮಾಹೆಗೆ ರೂ.1,65,790.00 ಗಳು ನಿಗಧಿಯಾಗಿರುತ್ತದೆ.

...2

ಇದರಲ್ಲಿ ಪಶುವೈದ್ಯರು, ಅರೆತಾಂತ್ರಿಕ ಸಿಬ್ಬಂದಿ, ವಾಹನ ಚಾಲಕ ಕಮ್ ಗ್ರೂಪ್ ಡಿ ಮತ್ತು ಕರೆ ನಿರ್ವಾಹಕರುಗಳ ವೇತನ ಹಾಗೂ ಇಂಧನ ವೆಚ್ಚ, ಔಷಧಿ ಮತ್ತು ರಾಸಾಯನಿಕಗಳ ವೆಚ್ಚ ಮತ್ತು ವಾಹನಗಳ ನಿರ್ವಹಣೆ ಮತ್ತು ಸಹಾಯವಾಣಿ 1962ನ ನಿರ್ವಹಣೆಯು ಸಹ ಒಳಗೊಂಡಿರುತ್ತದೆ.

ಸಂಚಾರಿ ಪಶು ಚಿಕಿತ್ಸಾ ವಾಹನಗಳ ಮೂಲಕ ರೈತರ ಮನೆ ಬಾಗಿಲಿಗೆ ಅಗತ್ಯ ತುರ್ತು ಪಶುವೈದ್ಯಕೀಯ ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. 2023-24, 2024-25 ಮತ್ತು 2025-26ನೇ (ಜುಲೈ-2025ರ ಅಂತ್ಯದವರೆಗೆ) ಸಾಲುಗಳಲ್ಲಿ ಕ್ರಮವಾಗಿ 151315, 365398 ಮತ್ತು 121808 ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಕ್ರಮವಾಗಿ 110821, 225960 ಮತ್ತು 69206 ರೈತರುಗಳು ಪ್ರಯೋಜನ ಪಡೆದಿರುತ್ತಾರೆ.

ಭಾರತ ಸರ್ಕಾರದ LHDCP-ESVHD ಯೋಜನೆಯಡಿ ಆರಂಭಿಸಲಾದ ಸಂಚಾರಿ ಪಶುಚಿಕಿತ್ಸಾ ಘಟಕವಾಹನಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ಹಾಗೂ ಭ್ರಷ್ಟಾಚಾರ ನಡೆದಿರುವುದಿಲ್ಲ. ನಿಯಮಾನುಸಾರ ಟೆಂಡರ್ ಮುಖಾಂತರ ಸೇವಾ ಪೂರೈಕೆದಾರರನ್ನು ಗುರುತಿಸಿ, ಟೆಂಡರ್ ಷರತ್ತಿನಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಸಂಖ್ಯೆ:ಪಸಂಮೀ 149 ಸಲೆವಿ 2025**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**